ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ.16/ಜೆ, 1ನೇ ಮಹಡಿ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು- 560 052. ದೂರವಾಣಿ ಸಂಖ್ಯೆ: 080-22380140,22382361/2
ಫ್ಯಾಕ್ಸ : 080 - 49071400

ಸಂ:ಕರಅನಿನಿ/IFB/2017-18/65

ದಿನಾಂಕ:24.03.2018

## ವಾಹನ ವಿಲೇವಾರಿಗಾಗಿ ಬಿಡ್‌ಗಳ ಆಹ್ವಾನ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಹೆಸರಿನಲ್ಲಿ ನೊಂದಣಿಯಾಗಿ ಚಾಲನಾ ಸ್ಥಿತಿಯಲ್ಲಿರುವ ಕೆಳಕಂಡ ವಾಹನದ ವಿಲೇವಾರಿಗಾಗಿ ಬಿಡ್‌ಗಳ ಆಹ್ವಾನ.

| ವಾಹನ ಮಾದರಿ ಹಾಗೂ ಸಂಖ್ಯೆ | ಖರೀದಿ ವರ್ಷ | ಇಂಧನ |
|---|---|---|
| ಕೆ.ಎ.04-ಎಂ.ಹೆಚ್ 9050 ಇನ್ನೋವಾ | 2010 | ಡಿಸೇಲ್ |

1. ಆಸಕ್ತ ಬಿಡ್‌ದಾರರು ಮೇಲ್ಕಂಡ ವಾಹನದ ಬಿಡ್‌ಗಾಗಿ ಅರ್ಜಿ ಸಲ್ಲಿಸಿ, ಹಿಂದಿರುಗಿಸಲಾಗದ ಟೆಂಡರ್ ಅರ್ಜಿ ಶುಲ್ಕ ರೂ.1,000/-ಗಳನ್ನು (ರೂ.ಒಂದು ಸಾವಿರ ಮಾತ್ರ) ಕಛೇರಿ ವೇಳೆಯಲ್ಲಿ ನಗದಾಗಿ ಪಾವತಿಸಿ ಖಾಲಿ ಟೆಂಡರ್ ಫಾರಂಗಳನ್ನು ದಿ:26.03.2018 ರಿಂದ 05.04.2018ರವರೆಗೆ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
2. ಆಸಕ್ತ ಬಿಡ್‌ದಾರರು ಮೇಲಿನ ವಿಳಾಸದ ಕಛೇರಿ ವೇಳೆಯಲ್ಲಿ ವಾಹನವನ್ನು ಪರಿಶೀಲಿಸಬಹುದಾಗಿರುತ್ತದೆ.
3. ಖಾಲಿ ಅರ್ಜಿ ಫಾರಂ ಪಡೆದ ಬಿಡ್‌ದಾರರು ತಾವು ಅರ್ಜಿ ಪಡೆದ ಹೆಸರಿನಲ್ಲಿಯೇ ಬಿಡ್‌ಗಳನ್ನು ಸಲ್ಲಿಸುವುದು.
4. ವಾಹನಕ್ಕೆ ಇ.ಎಂ.ಡಿ. ಮೊತ್ತ ರೂ.10,000/-ಗಳನ್ನು (ರೂ.ಹತ್ತು ಸಾವಿರ ಮಾತ್ರ) ವ್ಯವಸ್ಥಾಪಕ ನಿರ್ದೇಶಕರು, ಕರಅನಿನಿ, ಬೆಂಗಳೂರು ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಡಿ.ಡಿ. ರೂಪದಲ್ಲಿ ಪಡೆದು ಮುಚ್ಚಿದ ಲಕೋಟೆಯಲ್ಲಿ ದಿ:09.04.2018ರ ಮದ್ಯಾಹ್ನ 3.00ಗಂಟೆಯ ಒಳಗೆ ಸಲ್ಲಿಸತಕ್ಕದ್ದು. ಅಂದೇ ಹಾಜರಿರುವ ಬಿಡ್‌ದಾರರ ಸಮ್ಮುಖದಲ್ಲಿ ಬಿಡ್‌ಗಳನ್ನು ತೆರೆಯಲಾಗುವುದು.
5. ಆಯ್ಕೆಯಾದ ಬಿಡ್‌ದಾರರು ಒಂದು ವಾರದ ಒಳಗೆ ನಮೂದಿತ ಬಿಡ್ ಮೊತ್ತದಲ್ಲಿ ಸಲ್ಲಿಕೆಯಾದ ಇ.ಎಂ.ಡಿ. ಮೊತ್ತದ ಹೊಂದಾಣಿಕೆ ನಂತರ ವ್ಯತ್ಯಾಸದ ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ಕರಅನಿನಿ, ಬೆಂಗಳೂರು ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಡಿ.ಡಿ. ರೂಪದಲ್ಲಿ ಸಲ್ಲಿಸಿ ವಾಹನವನ್ನು ಸುಪರ್ದಿಗೆ ಪಡೆಯುವುದು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲುಹಾಕಿಕೊಳ್ಳಲಾಗುವುದು.
6. ಆಯ್ಕೆಯಾದ ಬಿಡ್‌ದಾರರು ತಮ್ಮ ಬಿಡ್‌ನಲ್ಲಿ ನಮೂದಿಸಿರುವ ಮೊತ್ತ ಪಾವತಿಸಿದ 15 ದಿನಗಳ ಒಳಗಾಗಿ ವಾಹನಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳತಕ್ಕದ್ದು.
7. ಭರ್ತಿ ಮಾಡಿ ಸಲ್ಲಿಕೆಯಾಗಿರುವ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಕಾರಣ ನೀಡದೆ ಪರಿಗಣಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು, ಕರಅನಿನಿ ರವರು ಹೊಂದಿರುತ್ತಾರೆ.

24/3/2018
ಮುಖ್ಯ ಇಂಜಿನಿಯರ್
ಕರಅನಿನಿ, ಬೆಂಗಳೂರು.